# ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ಸುತ್ತೋಲೆ

ವಿಷಯ : ಹೂ ಕುಂಡಲೆಗಳ ಬಾಡಿಗೆ, ಠೇವಣಿ, ಟೆಂಡರ ಫಾರ್ಮ ಬೆಲೆ ಪರಿಷ್ಕರಣೆ ಮಾಡಿದ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಒಪ್ಪಿಗೆ ದಿನಾಂಕ : 16-3-21

| ಅ. ನಂ | ವಿವರಣೆ | 2021-22 ನೇ ಸಾಲಿಗೆ ನಿಗದಿ ಪಡಿಸಿದ ಬೆಲೆ |
|---|---|---|
| 1 | ಹೂ ಕುಂಡೆ ಠೇವಣಿ | ಇರುವದಿಲ್ಲಾ |
| 2 | ಪ್ರತಿ ಹೂ ಕುಂಡೆ ಬಾಡಿಗೆ ಪ್ರತಿ ದಿನಕ್ಕೆ | 25=00 |
| 3 | ಟೆಂಡರ ಫಾರ್ಮ– ಹಣ್ಣುಗಳಿಗೆ (ಹುಣಸೆ, ಮಾವು, ತೆಂಗು ಮತ್ತು ಇತ್ಯಾದಿ) | 400=00 + ಟ್ಯಾಕ್ಸ |
| 4 | ಟೆಂಡರ ಫಾರ್ಮ– ಗಿಡ ಅಥವಾ ಕಟ್ಟಿಗೆ ವಿಲೇವಾರಿ | 2000=00 + ಟ್ಯಾಕ್ಸ |

1. ಮಾನ್ಯ ಕುಲಪತಿಗಳ ಒಪ್ಪಿಗೆಯ ಮೇರೆಗೆ ಕುಂಡಲೆಗಳ ಠೇವಣಿ ಹಣವನ್ನು 2021-22 ನೇ ಸಾಲಿನಿಂದ ತೆಗೆದುಹಾಕಲಾಗಿದೆ. ಕುಂಡಲೆಗಳನ್ನು ಬದಲಿಸುವದಾಗಲಿ, ಹಾಳು ಮಾಡುವದಾಗಲಿ ಕಂಡು ಬಂದಲ್ಲಿ ಪ್ರತಿ ಕುಂಡಲೆಗೆ ರೂ.200=00 ದಂಡ ಆಕರಣೆ ಮಾಡಲಾಗುವದು.
2. ಕುಂಡಲೆಗಳ ಬಾಡಿಗೆಯನ್ನು ಎರಡು ದಿನ ಮುಂಚಿತವಾಗಿ ಉದ್ಯಾನ ವಿಭಾಗದ ಸೀಲು ಇರುವ ಚಲನ್ ಪಡೆದು ಬ್ಯಾಂಕಿನಲ್ಲಿ ಹಣ ಕಟ್ಟಬೇಕು. ತದನಂತರ ಬ್ಯಾಂಕಿನಿಂದ ಪಡೆದ ಚಲನ್ ಪ್ರತಿ ಮತ್ತು ಕುಂಡಲೆಗಳನ್ನು ಸುರಕ್ಷಿತವಾಗಿ ಮರಳಿಸುತ್ತೇವೆ ಮತ್ತು ಕುಂಡಲೆಗಳಿಗೆ ಏನಾದರು ಹಾನಿ ಮಾಡಿದಲ್ಲಿ ಪ್ರತಿ ಕುಂಡಲಕ್ಕೆ ರೂ. 200=00 ದಂಡ ಕಟ್ಟುತ್ತೇವೆ ಎಂಬ ಒಪ್ಪಿಗೆ ಪತ್ರವನ್ನು ಉದ್ಯಾನ ವಿಭಾಗಕ್ಕೆ ಸಲ್ಲಿಸಿದ ನಂತರ ಕುಂಡಲೆಗಳನ್ನು ಇಡಲಾಗುವದು. ನಮ್ಮ ವಿಭಾಗದಲ್ಲಿ ನಗದು ಹಣ ಸ್ವೀಕರಿಸುವದಿಲ್ಲಾ. ಬ್ಯಾಂಕ ರಜೆ ಇದ್ದ ಪಕ್ಷದಲ್ಲಿ ಮಾತ್ರ ನಗದು ಸ್ವೀಕರಿಸಲಾಗುವದು.
3. ಒಮ್ಮೆ ಚಲನ ಮೂಲಕ ಕುಂಡಲೆಗಳ ಬಾಡಿಗೆ, ಟೆಂಡರ ಫಾರ್ಮ ಫೀ ಹಣವನ್ನು ಬ್ಯಾಂಕಿಗೆ ಸಂದಾಯಮಾಡಿದ ಹಣವನ್ನು ಯಾವುದೇ ಕಾರಣಕ್ಕೆ ಮರಳಿ ನೀಡಲಾಗುವದಿಲ್ಲಾ.
4. ನರ್ಸರಿಯಲ್ಲಿ ಲಭ್ಯವಿರುವ ಕುಂಡಲೆಗಳನ್ನು ಮಾತ್ರ ಇಡಲಾಗುವದು. ಮತ್ತು ತಾವು ಕೇಳಿದ ಕುಂಡಲೆಗಳನ್ನು ಇಡಲಾಗುವದಿಲ್ಲಾ.
5. ಮುಂಚಿತವಾಗಿ ಹಣ ಕಟ್ಟದಿದ್ದರೆ ಯಾವುದೇ ಕಾರಣಕ್ಕೆ ಕುಂಡಲೆಗಳನ್ನು ಇಡಲಾಗುವದಿಲ್ಲಾ ಮತ್ತು ಟೆಂಡರ ಫಾರ್ಮ ನೀಡಲಾಗುವದಿಲ್ಲಾ.
6. ಕುಲಸಚಿವರ ಸಚಿವಾಲಯದಿಂದ ನಡೆಯುವ ಸಭೆ ಸಮಾರಂಭಗಳನ್ನು ಹೊರತು ಪಡಿಸಿ ಉಳಿದ ಕಾರ್ಯಕ್ರಮಗಳಿಗೆ ಹೂ ಕುಂಡಲೆಗಳು ಬೇಕಾದಲ್ಲಿ ಕಡ್ಡಾಯವಾಗಿ ಹಣ ಸಂದಾಯ ಮಾಡಬೇಕು.

Sd

**ಕುಲಸಚಿವರು**